ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಎಡಿಪಿ/2023-24

ಆಯುಕ್ತರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 31.05.2023

**ಸುತ್ತೋಲೆ**

ವಿಷಯ : ಜೀವನ ಕೌಶಲ್ಯ ತರಬೇತಿಗೆ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಿಗೆ/ ಸಿಬ್ಬಂದಿಯವರಿಗೆ ನಿಯೋಜಿಸುವ ಬಗ್ಗೆ.
ಉಲ್ಲೇಖ : ರಾಜ್ಯ ಸರ್ಕಾರದ ಪತ್ರ ಸಂಖ್ಯೆ:ಯುಸೇಇ/ರಾ.ಸೇ.ಯೋ/33/2021/2023-24/92 ದಿನಾಂಕ: 30.05.2023

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಜೀವನ ಕೌಶಲ್ಯ ತರಬೇತಿ ಕಾರ್ಯಾಗಾರವನ್ನು ಬೆಂಗಳೂರಿನ ನಿಮ್ಹಾನ್ಸ ಸಹಯೋಗದೊಂದಿಗೆ ಆಯೋಜಿಸಿದೆ. ಸದರಿ ಜೀವನ ಕೌಶಲ್ಯ ಹಾಗೂ ಸಮಾಲೋಚನಾ ಸೇವೆಗಳ ಕಾರ್ಯಾಗಾರವು ಜನ ಆರೋಗ್ಯ ಕೇಂದ್ರ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್, ಬೆಂಗಳೂರು ಇಲ್ಲಿ ಈ ಕೆಳಕಂಡ ದಿನಾಂಕಗಳಂದು ನಡೆಯುತ್ತವೆ. ಸದರಿ ತರಬೇತಿಯನ್ನು ಹೊಂದಿರುವ ಕಾರ್ಯಕ್ರಮಾಧಿಕಾರಿಯವರು ತಮ್ಮ ಸುತ್ತ ಮುತ್ತಲಿನ ಕಾಲೇಜುಗಳ ವಿದ್ಯಾರ್ಥಿಗಳಿಗೆ ತರಬೇತಿ ನಡೆಸಬಹುದಾಗಿರುವ ತರಬೇತಿ ಕಾರ್ಯಾಗಾರ ಇದಾಗಿರುತ್ತದೆ.

| ಕ್ರ.ಸಂ | ದಿನಾಂಕ | ಕ್ರ.ಸಂ | ದಿನಾಂಕ |
|---|---|---|---|
| 1. | 12.06.2023 ರಿಂದ 17.06.2023 | 8 | 10.07.2023 ರಿಂದ 15.7.2023 |
| 2. | 31.07.2023 ರಿಂದ 05.08.2023 | 9 | 21.08.2023 ರಿಂದ 26.8.2023 |
| 3. | 11.09.2023 ರಿಂದ 16.09.2023 | 10 | 20.11.2023 ರಿಂದ 25.11.2023 |
| 4. | 11.12.2023 ರಿಂದ 16.12.2023 | 11 | 18.12.2023 ರಿಂದ 23.12.2023 |
| 5. | 01.01.2024 ರಿಂದ 06.01.2024 | 12 | 29.01.2024 ರಿಂದ 03.02.2024 |
| 6. | 12.02.2024 ರಿಂದ 17.02.2024 | 13 | 26.02.2024 ರಿಂದ 02.03.2024 |
| 7. | 11.03.2024 ರಿಂದ 16.03.2024 | 14 | 18.03.2024 ರಿಂದ 23.03.2024 |

ಸದರಿ ಕಾರ್ಯಾಗಾರಕ್ಕೆ ಆಸಕ್ತಿಯುಳ್ಳ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ/ಬೋಧಕ ಸಿಬ್ಬಂದಿಯವರ ಪ್ರಾಚಾರ್ಯರ ಸಮ್ಮತಿಯೊಂದಿಗೆ ತಮ್ಮ ಇಂಗಿತವನ್ನು https://forms.gle/X5xaAvt6kpXDrLXg9 ರ ಮೂಲಕ ದಿನಾಂಕ: 05.06.2023 ರೊಳಗಾಗಿ ಭರ್ತಿಮಾಡುವುದು. ಸದರಿ ಮಾಹಿತಿಯನ್ನು ಆಯೋಜಕರಿಗೆ ಇಲಾಖೆಯಿಂದ ಕಳುಹಿಸಲಾಗುವುದು. ನಿಮ್ಹಾನ್ಸ ಸಂಸ್ಥೆಯಿಂದ ನೊಂದಾಯಿಸಿಕೊಂಡ ಕಾರ್ಯಕ್ರಮಾಧಿಕಾರಿಗಳಿಗೆ/ ಸಿಬ್ಬಂದಿಯವರಿಗೆ ಬರುವ ಮಿಂಚಂಚೆಯ ಧೃಡೀಕರಣವನ್ನು ಆಧರಿಸಿ ಸದರಿಯವರನ್ನು ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮಕ್ಕೆ ನಿಯೋಜಿಸಲು ಕ್ರಮ ವಹಿಸುವಂತೆ ಪ್ರಾಚಾರ್ಯರಿಗೆ ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ.ಪ್ರದೀಪ್ ಬಿ.ಎಸ್ ಪ್ರಧಾನ ಸಂಶೋಧಕರು, ದೂರವಾಣಿ ಸಂಖ್ಯೆ 9845452250 ಮಿಂಚಂಚೆ doctorpradeepbs@gmail.com; ಅಥವಾ ಶ್ರೀಮತಿ ವಿದ್ಯಾ ಟಿ.ಸಿ ಕಾರ್ಯಕ್ರಮ ಸಂಯೋಜಕರು 9741271777 ಮಿಂಚಂಚೆ rnsri93@gmail.com ಸಂಪರ್ಕಿಸುವುದು.

K-G- 02/06/23
ನಿರ್ದೇಶಕರು

ಇವರಿಗೆ:-ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ರಾಜ್ಯ ಎನ್‌ಎಸ್‌ಎಸ್ ಅಧಿಕಾರಿಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಂಗಳೂರು-ಮಾಹಿತಿಗಾಗಿ
2. ಡಾ.ಪ್ರದೀಪ್ ಬಿ.ಎಸ್ ಪ್ರಧಾನ ಸಂಶೋಧಕರು, ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ, ಜನ ಆರೋಗ್ಯ ಕೇಂದ್ರ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್ ಬೆಂಗಳೂರು.
3. ಇ-ಆಡಳಿತ ಇಲಾಖಾ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು
4. ಕಛೇರಿ ಕಡತಕ್ಕೆ